ಪಥದಿಂದ ವಾಲಿದ. ನೆಲದ ಮೇಲೆ ಆ ಐಸ್ ಪ್ಯಾಕ್ ಮೊಗಚಿ ಬಿದ್ದ ಮೇಲೆ ಅದನ್ನು ಎತ್ತಿದ.

'ಸರಿಯಾಗಿ ಹಿಡ್ಕೋ...' ಎಂದ ಮ್ಯಾಕ್ಸ್ ಮತ್ತೆ ಬಿಯರ್ ಓಪನ್ ಮಾಡೋ ಧೈರ್ಯ ಮಾಡದೆ ಸ್ಕಾಚ್ ಮತ್ತು ಸೋಡಾ ಹಿಡಿದು ಬೀಚ್ ಹೌಸಿನ ವರಾಂಡದತ್ತ ನಡೆದ. ಐಸ್ ಪ್ಯಾಕನ್ನು ಹಬೆಯಾಡುತ್ತಿದ್ದ ನೋವಿನ ಮೂಲವನ್ನು ಹುಡುಕುತ್ತ ಆ ಜಾಗದಲ್ಲೆಲ್ಲ ಒತ್ತುತ್ತಾ ಕುಂಟುತ್ತಾ ಆತನನ್ನು ಹಿಂಬಾಲಿಸಿದ ವಿಕಾಸ.

ವಿಕಾಸ ಮತ್ತು ಮ್ಯಾಕ್ಸ್ ಬೇರೆ ಬೇರೆ ಜಾಗದಿಂದ ವಲಸೆ ಬಂದು ಈ ಪ್ರಾಂತ್ಯದಲ್ಲಿ ಬೇರು ಬಿಟ್ಟವರಿಗೆ ಹುಟ್ಟಿದವರು. ಹಳೆಯ ಗೆಳೆಯರು. ವಿಕಾಸ ಇತ್ತೀಚೆಗಷ್ಟೇ ಆನ್‌ಲೈನ್‌ನಲ್ಲಿ ಫೋಟೊಗ್ರಫಿ ಕಲಿಯಲು ಶುರುಮಾಡಿದ್ದಾನೆ. ರೈ ಬ್ರದರ್ಸ್ ಅವರ ಸಿಇಒ ಪ್ರಸಾದ್ ರೈ ತನ್ನ ಆಪ್ತಗೆಳೆಯರ ಕೂಟದವರು ಬಂದಾಗ ಸೇರಲೆಂದು ಕಟ್ಟಿಸಿದ್ದ ಬೀಚ್ ಹೌಸಲ್ಲಿ ಈ ಇಬ್ಬರು ಈಗ ಅಡ್ಡಾಗಿದ್ದರು. ಮ್ಯಾಕ್ಸ್ ಇಲ್ಲಿನ ಕೇರ್ ಟೇಕರ್ ನಾರಾಯಣನಿಗೆ ದುಬೈಯಿಂದ ಬರುವ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾ ಇದ್ದದ್ದರಿಂದ ಆಗಾಗ ನಾರಾಯಣ ಮ್ಯಾಕ್ಸ್‌ಗೆ ಈ ಜಾಗದಲ್ಲಿ ಬೆಳಗ್ಗೆಯಿಂದ ಸಂಜೆ ತನಕ ಕೂತು ಕುಡಿಯಲು ಅವಕಾಶ ಮಾಡುತ್ತಿದ್ದ.

'ನಂಗೆ ನನ್ನ್ ತಿಕ ಇರೋದೆ ಗೊತ್ತಾಗ್ತಿಲ್ಲ ಗುರೂ.... ಎಲ್ಲ ಜುಮ್ಮ್ ಅಂತಿದೆ...' ಬೀಜಕ್ಕೆ ಹೊಡೆಸಿಕೊಂಡಿದ್ದ ವಿಕಾಸ ಪೋರ್ಚ್ ಅಲ್ಲಿದ್ದ ಈಸಿ ಚೇರ್ ಮೇಲೆ ಹರಡಿಕೊಂಡು ನರಳಿದ.

ಇನ್ನೊಂದು ಕುಷನ್ ಕುರ್ಚಿಯಲ್ಲಿ ಕಾಲಗಲಿಸಿ ಕುಕ್ಕರಿಸಿದ್ದ ಮ್ಯಾಕ್ಸ್ ಬ್ಲೂ ಕೂಲಿಂಗ್ ಗ್ಲಾಸ್ ಹಾಕಿ, ಸಮುದ್ರದಿಂದ ಪ್ರತಿಫಲನಗೊಂಡು ಕಣ್ಣಿಗೆ ರಾಚುತ್ತಿದ್ದ ವಿಕಿರಣಗಳಷ್ಟು ಶಾಖ ಹೊಮ್ಮಿಸುತ್ತಿದ್ದ ಬೆಳಕನ್ನೇ ನೋಡುತ್ತಾ ಗ್ಲಾಸಿಗೆ ಸ್ಕಾಚ್ ಸುರಿದು, ಸೋಡಾ ಮಿಕ್ಸ್ ಮಾಡಿದ.

'ಒಂದ್ ಪೆಗ್ಗ್ ಹಾಕು ಎಲ್ಲ ಸರಿಯಾಗುತ್ತೆ...' ಅಂದು ಒಂದೇ ಏಟಿಗೆ ಗ್ಲಾಸ್ ಖಾಲಿ ಮಾಡಿದ.

ತನಗಾಗಿ ಒಂದು ಲೋಟ ಹೆಂಡ ಮತ್ತು ಮಂಜಿನಲ್ಲಿ ಅದ್ದಿದ ಸೋಡಾ ಮಿಶ್ರಿಸಿ ಒಂದೆರೆಡು ಸಿಪ್ ಹಾಕಿದ ವಿಕಾಸ, 'ಇಂಥ ಟೈಮಲ್ಲಿ ಯಾರಾದ್ರೂ ಫಿಗರಿದ್ರೆ ಮಸ್ತಾಗಿರೋದು...' ಎಂದ.

'ಅಯ್ಯೋ ಗುರು, ಅದೆಲ್ಲ ಆಗಲ್ಲ... ಈ ನಾರಾಯಣ ದೊಡ್ಡ್ ಬಡ್ಡಿಮಗ; ಅವನ್ಗೆ ಯಾರೂ ಬೇಕಿಲ್ಲ ನಮ್ಮಂತವ್ರು ಯಾರಾದ್ರನ್ನ ಎತ್ತಾಕೊಂಡ್ ಬಂದ್ರೆ ಭಾರೀ ಮಾರಲ್ ಪೊಲೀಸಿಂಗ್ ಮಾಡ್ತಾನೆ... ಫ್ರಸ್ಟ್ರೇಟೆಡ್ ಸೋಲ್. ಅದೂ ಅಲ್ದೇ ಈ ರೈ ಮನೆಯೆಲ್ಲ ಸಿಸಿ ಕ್ಯಾಮ್ ಬೇರೆ ಹಾಕ್ಸಿಟ್ಟಿದ್ದಾನೆ ಮಾರಾಯ... ಹೆಂಗೋ ಒಂದ್ ದಿನಕ್ಕೆ ಬರೀ ನಾನೊಬ್ಬನೇ ಅಥವಾ ಈ ತರ ನಿನ್ನ್ ಜತೆ ಆದ್ರೆ ಅಡ್ಜಸ್ಟ್ ಮಾಡ್ಬಹುದು...'

'ಇದಕ್ಕೆ ನಾವ್ ಶಾಲೆಗೆ ಹೋಗ್ತಾ ಇದ್ದಾಗ ನಮ್ಮ್ ಸೀನಿಯರ್ರುಗಳೆಲ್ಲ ಈ ಊರಿನ ಸ್ಲಾಂಗಲ್ಲಿ 'ಬಲ್ಲೆಗೆ ಹೋಗಿದ್ದಾರೆ...' ಅಂತಾ ಇದ್ರಲ್ಲ ಅದು ಯಾಕೆ ಅಂತ ಈಗ ತುಂಬಾ ಕ್ಲಿಯರ್ ಆಗ್ ಅರ್ಥಾ ಆಯ್ತೂ ನೋಡು...'

'ಅಲ್ವಾ ಕಷ್ಟದಲ್ಲಿ ಯಾರೋ ಒಬ್ರು ಸೆಟ್ಲ್ ಆಗಿರ್ತಾರೆ... ಇಲ್ಲಾ ಅವ್ರಿಗೆ ಮದ್ವೆ ಆಗಿರುತ್ತೆ... ಇಲ್ಲಾ ಅವ್ಳು ಬೇರೇನೆ ಜಾತಿಯೋಳ್ವು.... ಸೈಲೆಂಟಾಗಿ ಹೋಗಿ ಮಿಶನ್ ಬಿಡಕ್ಕೆ ಆ ಕಾಲದ್ ಕೆರ್ವಾಜೆಯಲ್ಲಿ ಯಾವ್ ಲಾಡ್ಜ್ ಇತ್ತು ಹೇಳು...' ಎಂದು ದೀರ್ಘ ನಿಟ್ಟುಸಿರು ಬಿಟ್ಟ.

'.... ಹಂಗೇನಾದ್ರೂ ಹೋಗಿದ್ರುನೂ ರೂಂ ಎಲ್ಲಿ ಕೊಡ್ತಾ ಇದ್ರೂ ಆ ಕಾಲದ್ ಜನ, ಅದೂ ಈ ಕೆಲ್ಸಕ್ಕೆ. ಪೊಲೀಸ್ ರೈಡು ಅದೂ ಇದೂ ಅಂತ ಮಹಾ ಪ್ಯಾರನ್ನಾಯ್ ಕ್ರಿಯೇಟ್ ಆಗಿರೋದು... ಮತ್ತೆ ಲೋಕಲ್ ಪೇಪರಲ್ಲಿ ಸುದ್ದಿ ಆಗೋ ಭಯ ಬೇರೆ... ಈಗ್ಲೂ ಆ ಹಾಳೂರಲ್ಲಿ ಎಲ್ಲಿದೆ, ಒಂದೋ ಎರಡೋ ಲಾಡ್ಜ್ ಅಷ್ಟೇ....ಬಟ್ ಆದ್ರೂ ನೋಡು ಈಗ್ಲೂ ಹೆಂಗ್ ಒಂದ್ ರೂಮ್ ಬುಕ್ ಮಾಡಿ ಹೋಗೋದು ಅಂದ್ರುನೂ ಕಷ್ಟಪ್ಪ... ಆಧಾರೂ, ಪಾನೂ...ಇಲ್ಲ ಬಿ.ಒ.ಎಕ್ಸ್. ಅಲ್ಲಿ ಬುಕ್ಕು ಮಾಡಿದ್ರೆ ಡಿಜಿಟಲ್ ಫೂಟ್ ಪ್ರಿಂಟಾಗಿ ನಮ್ಮ ಕುಲಗೋತ್ರಾ ಎಲ್ಲ ಫಾರೆವರ್ ಆಗಿ ಅಡಕ ಆಗಿರುತ್ತೆ ...'

'ಅದೇ ಮೇಲ್ ಕೂತಿರೋ ಅಣ್ಣಾ ಕಾಯ್ತಾ ಇರ್ತಾನೆ... ನಿನ್ನ್ ಕುಂಡಿ ಹೊಡಿಬೇಕು ಅಂದ್ರೆ ಈ ಡೇಟಾನೆಲ್ಲ ತೆಗಿತ್ತಾನೆ... ಅದಕ್ಕೆ ಆ ಕಾಲದಲ್ಲೇ ಆ ಜನ ಹುಡುಕಿದ್ದ್ ಜಾಗ ಈ 'ಬಲ್ಲೆ...'

'ಆ ಬಲ್ಲೆಗೆ ಇವ್ರು ಇನ್ನೇನೋ ಕರೀತಾ ಇದ್ರೂ... 'ಕಮ್ಯುನಿಸ್ಟೋ ..ಕಾಂಗ್ರೆಸ್ಸೋ.... ಅಂತೇನೋ...